ಬಂದು ಕರೆದುಕೊಂಡು ಹೋದರೆ ಏನು ಗತಿ? ನಾವು ಕಟ್ಟಿದ ಕನಸೆಲ್ಲಾ ಹಾಳಾಗುತ್ತದೆಯೆಂದು ಅಳುಮುಖ ಮಾಡಿದನು.

ನಾಯಿ ಸಾಕುವುದರಲ್ಲಿ ನಿಸ್ಸೀಮನಾದ ಭುವನ್, 'ಎರಡು ದಿನಗಳಲ್ಲಿ ಬರುತ್ತದೆ. ಇಲ್ಲಾಂದ್ರೆ ಜನ್ಮದಲ್ಲೇ ಬರೊದಿಲ್ಲ' ಎಂದು ಹೇಳಿದ. ಬಂದ್ರ ಅದಕ್ಕೂ ಒಂದು ಉಪಾಯ ಮಾಡಲಾಯಿತು. ಮರಿಗಳ ಸುತ್ತಲೂ ಭತ್ತದ ಒಣಹುಲ್ಲಿನ ಪೆಂಡೆಗಳನ್ನು ಜೋಡಿಸಿ ಮರಿಗಳನ್ನು ಕಾಣದಂತೆ ಮಾಡಿದರು. ಈಗ ಒಂದು ವೇಳೆ ಅವರಮ್ಮ ಬಂದರೂ ಕಾಣದೆ ವಾಪಸು ಹೋಗುತ್ತದೆ. ಇನ್ನು ಮರಿಗಳು ನಮ್ಮವೇಯೆಂದು ಹಿರಿ ಹಿರಿ ಹಿಗ್ಗಿದರು. ಮರಿಗಳಿಗೆ ಬೆನ್ನು ಸವರಿ ಎತ್ತಿ ಆಡಿಸಿ ಎಲ್ಲರೂ ತಮ್ಮ ಮನೆಗಳಿಗೆ ತೆರಳಿದರು. ಇವತ್ತು ನಾಳೆ ಕಳೆದರೆ ಆಯಿತು. ಮರಿಗಳು ನಮ್ಮವೆಂದು ಚಿಂಟು ಸಮಾಧಾನ ಮಾಡಿಕೊಂಡನು. ಮಧ್ಯಾಹ್ನ ಊಟದ ನಂತರ ನಿದ್ದೆ ಬಂದಂತೆ ಆಯಿತು. ಮರಿಗಳಿಗೆ ಹಾಲು ಕುಡಿಸಿ ಬಂದು ಅಟ್ಟದ ಮೇಲೆ ಮಲಗಿದ.

ಚಿಂಟೂ.. ಚಿಂಟೂ... ಅಮ್ಮ ಕೂಗುವುದನ್ನು ಕೇಳಿ ಎಚ್ಚರಗೊಂಡವನೇ ದಡಬಡಸಿ ಎದ್ದು ಸೀದಾ ನಾಯಿಮರಿಗಳ ಬಳಿಗೆ ಓಡಿದ. ಗೆಳೆಯರೆಲ್ಲಾ ಆಗಲೇ ಜಮಾಯಿಸಿದ್ದರು. ಯಾಕೊ ಅನುಮಾನವಾಗಿ ನಿಧಾನವಾಗಿ ಬುಟ್ಟಿಯನ್ನು ತೆಗೆದನು. ಅಮ್ಮಾ... ಅಂತ ಚೀರುತ್ತಾ... ನನ್ನ ಮರಿಗಳು ಎಲ್ಲಿ? ಅಳುತ್ತಾ ಅಂಗಳಕ್ಕೆ ಬಂದನು. ಗೆಳೆಯರೆಲ್ಲಾ ಹಿಂಬಾಲಿಸಿದರು. ಅಪ್ಪ ಅಮ್ಮ ಇಬ್ಬರೂ ಅಲ್ಲಿದ್ದರು. ಚಿಂಟುವಿನ ಅಳು ಮುಗಿಲು ಮುಟ್ಟಿತು. 'ಅಳಬೇಡ, ಮರಿಗಳನ್ನು ನಾನೇ ಬಿಟ್ಟೆ. ಏಕೆಂದರೆ ಅವರಮ್ಮ ಬಂದು ಅಂಗಳದಲ್ಲಿ ಕಾಯುತ್ತಿತ್ತು. ಮಕ್ಕಳು ತಾಯಿ ಜೊತೆ ಇರಬೇಕು ಅಲ್ವಾ' ಅಮ್ಮ ತಲೆ ನೇವರಿಸುತ್ತಾ ಹೇಳಿದಳು. ನಾವು ಅವರಮ್ಮನಿಗಿಂತ ಚೆನ್ನಾಗಿ ನೋಡಿಕೊಳ್ತಾಯಿದ್ವಿ. ನೀವು ಬಿಡಬಾರದಿತ್ತು. ಗೆಳೆಯರು ಅಳುತ್ತಾ ಹೇಳಿದರು.

ಆಗ ಗೌಡರ ಗುಂಡಪ್ಪ ಮಕ್ಕಳನೆಲ್ಲಾ ಹತ್ತಿರ ಕರೆದು ಈಗ ನಾನು ನಿಮಗೆ ಮರಿಗಳನ್ನು ತೋರಿಸ್ತೀನಿ. ಸಂತೋಷಾನಾ? ಕೇಳಿದರು. ಚಿಂಟು ಸಮೇತ ಎಲ್ಲರೂ 'ಹೋ' ಎಂದು ಕೂಗಿದರು. ಆದರೆ ಅವರಮ್ಮನ ಜೊತೆ ಎಂದು ಗೌಡರ ಗುಂಡಪ್ಪ ಹೇಳಿದರು. ಸದ್ಯ ಮರಿಗಳು ಸಿಕ್ಕರೆ ಸಾಕೆಂದು ಒಪ್ಪಿದರು. ಅಂಗಳದ ಪಕ್ಕದಲ್ಲಿರುವ ಹುಲ್ಲಿನ ಬಣವೆಯ ಬಳಿಗೆ ಕರೆದುಕೊಂಡು ಹೋಗಿ ತೋರಿಸಿದರು. ಧರ್ಮ, ಅರ್ಜುನ, ಭೀಮ ಅವರಮ್ಮನ ಬಳಿ ಹಾಲು ಕುಡಿಯುತ್ತಾ ಮಲಗಿದ್ದವು. ಅವುಗಳಿಗೆ ಈ ಲೋಕದ ಪರಿವೇ ಇರಲಿಲ್ಲ. ಅಷ್ಟರಲ್ಲಿ ಅಮ್ಮನೂ ಅಲ್ಲಿಗೆ ಬಂದರು. ಮಕ್ಕಳ ಮುಖದ ಮೇಲಿನ ಮಂದಹಾಸ ಕಂಡರು. ನಾವು ಎಷ್ಟೇ ಹಾಲು ಹಾಕಿದರೂ ತಾಯಿಯ ಹಾಲಿಗೆ ಸಮವಲ್ಲ. ತಾಯಿಯೊಂದಿಗೆ ಮಕ್ಕಳಿದ್ದರೆ ತಾಯಿಗೂ ಮಕ್ಕಳಿಗೂ ನೆಮ್ಮದಿ ಅಲ್ವಾ ಎಂದರು. ಚಿಂಟು ಹಾಗೂ ಗೆಳೆಯರು ತಲೆದೂಗಿದರು.

# ಎಷ್ಟು ಚಂದೈತೆ

**ಶೇಖರಯ್ಯ ಟಿಎಚ್ಎಂ**

ಕಲೆ: ಸಂತೋಷ್ ಸಸಿಹಿತ್ಲು



ಇಲ್ಲಿಂದಲ್ಲಿಗೆ ಅಲ್ಲಿಂದಿಲ್ಲಿಗೆ
ಓಡುವ ಚಿಟ್ಟೆ ಚೆಂದೈತೆ
ಯಾವುದೋ ಬಣ್ಣದ ಅಂಗಡಿಗೋಗಿ
ಬಣ್ಣ ಬಳ್ಕೊಂಡು ಬಂದೈತೆ

ಗರಿಯಾ ಬಿಚ್ಚಿ ಹಾಡುತ ನವಿಲು
ಎಷ್ಟು ಚೆಂದ ಕುಣಿತೈತಿ
ಯಾವ ಮಾಸ್ಟರ್ ಹತ್ರ ಹೋಗಿ
ಡಾನ್ಸ್ ಕಲಿತು ಬಂದೈತಿ

ಕುಹೂ ಕುಹೂ ಎಂದು ಹಾಡುವ
ಕೋಗಿಲೆ ದನಿಯು ಎಷ್ಟು ಚಂದೈತಿ
ಸರಿಗಮಪದನಿಸ ಸನಿದಪಮಗರಿಸ
ಎಲ್ಲಿ ಕಲಿತು ಕೊಂಡೈತಿ

ಜುಳು ಜುಳು ಹರಿವ ನೀರಿನ ಸದ್ದು
ಮನಕೆ ಸಂತಸ ನೀಡೈತಿ
ಮೈಮೇಲೆಲ್ಲ ಎರಚಿಕೊಂಡರೆ
ತುಂಬಾ ಮೋಜು ಸಿಗುತ್ತೈತಿ

ಬ್ಯಾಸಿಗಿ ಬಿಸಿಲಿಗೆ ಬೇವಿನ ಮರವು
ತುಂಬಾ ತಂಪು ನೀಡೈತಿ
ಕಾಡಿನ ಹೂಗಳ ವಾಸನೆಯಂತೂ
ಪರಿಮಳ ಎಲ್ಲೆಡೆ ಚೆಲ್ಲೈತಿ

## ಕುಂಚ ಪ್ರಪಂಚ



**ಪ್ರಾಚಿ ಪ್ರಸಾದ್ ದೇವಾಡಿಗ**

7ನೇ ತರಗತಿ, ಮಿನ್ನೆಪೊಲಿಸ್, ಅಮೆರಿಕ




ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in